**ಪುರಾಣಗಳ ಪ್ರಾಮಾಣ್ಯ**

**ಶ್ರೀ ಗುರುರಾಜೋವಿಜಯತೇ॥**

**ಶ್ರೀಲಕ್ಷ್ಮೀಹಯಗ್ರೀವಾಯನಮಃ। ಶ್ರೀ ವೇದವ್ಯಾಸಾಯ ನಮಃ॥**

**ವಿಷಯ ಪ್ರವೇಶ:**

**' ಮಾನಾಧೀನಾ ಮೇಯಸಿದ್ಧಿಃ '** ಎಂಬ ಶಾಸ್ತ್ರೀಯ ವಚನವಿದೆ. ಅಂದರೆ ಯಾವದಾದರೊಂದು ಪ್ರಮೇಯವು ಸಿದ್ಧವಾಗಬೇಕಾದರೆ ಅದಕ್ಕೆ ಪ್ರಮಾಣಗಳ ಸಹಾಯ / ಆಧಾರ ಬೇಕೆ ಬೇಕು. ಆದ್ದರಿಂದ ಭರತಖಂಡದಲ್ಲಿ ಉದಯಿಸಿದ ಎಲ್ಲ ಸಮಯಿಗಳೂ / ದರ್ಶನಕಾರರೂ ಪ್ರಥಮತಃ ತಮ್ಮ ತಮ್ಮ ಸಿಧಾಂತಗಳನ್ನು ಸಾಧಿಸಲು ಅವರು ಆಧರಿಸಿದ ಪ್ರಮಾಣಗಳು ಯಾವುವು, **(Epistemilogical basis)** ಅವುಗಳ ಸ್ವರೂಪ / ಲಕ್ಷಣಗಳೇನು ಎಂಬದನ್ನು ಅವರು ವಿವರಿಸಿದ್ದಾರೆ. ಈ ಪರಂಪರಾ ಕ್ರಮಾನುಸಾರವಾಗಿ ಶ್ರೀಆನಂದತೀರ್ಥರೂ ಸಹ ದ್ವೈತಸಿದ್ಧಾಂತ ಪ್ರತಿಷ್ಠಾಪನಾ ಸಂದರ್ಭದಲ್ಲಿ ಪ್ರಮಾಣಗಳ ಲಕ್ಷಣಗಳನ್ನು 'ಪ್ರಮಾಣಲಕ್ಷಣ' ಎಂಬ (ಭಗವಾನ್ ನಾರಾಯಣ ಕೃತ ಬ್ರಹ್ಮತರ್ಕಾನುಸಾರಿ) ಗ್ರಂಥವನ್ನು ರಚಿಸಿದ್ದಾರೆ. ಅದರಿಂದ ತಿಳಿದುಬರುವುದೇನೆಂದರೆ ;

ಪ್ರಮಾಣಗಳು, ಕೇವಲ ಪ್ರಮಾಣ ಮತ್ತು ಅಣುಪ್ರಮಾಣವೆಂದು ಎರಡು ವಿಧ.

ಮೊದಲನೆಯದರಲ್ಲಿ ಯಥಾರ್ಥ ಜ್ಞಾನವೇ ಕೇವಲ ಪ್ರಮಾಣ (ಈಶ್ವರ, ಲಕ್ಷೀ, ಯೋಗೀ,ಅಯೋಗೀ ಜ್ಞಾನಗಳು). ಎರಡನೆಯದರಲ್ಲಿ ಪ್ರತ್ಯಕ್ಷ, ಅನುಮಾನ ಮತ್ತು ಶಬ್ದದ್ವಾರ ಲಬ್ಧಜ್ಞಾನ. 'ನಿರ್ದೋಷಶಬ್ಧಃ ಆಗಮಃ' ಎಂದು ಶಬ್ದಕ್ಕೆ ಲಕ್ಷಣ. ಶಬ್ದದಲ್ಲಿ (ಆಗಮದಲ್ಲಿ) ಅಪೌರುಷೇಯ ಮತ್ತು ಪೌರುಷೇಯ ಎಂದು ಎರಡು ವಿಧ. ಅಪೌರುಷೇಯವೆಂದರೆ ಪುರುಷಕೃತ ಪ್ರಸಿದ್ಧಿರಹಿತವಾದವು ಅಥವಾ ಅಕರ್ತೃಕತ್ವ ಪ್ರಸಿದ್ಧಿ ಇರತಕ್ಕ ಮತ್ತು ಏಕರೂಪವಾದ ಅನುಪೂರ್ವಿ ಇರತಕ್ಕ ವಾಕ್ಯಸಮುದಾಯವು. ಉದಾ: ಋಗ್ಯಜುಸ್ಸಾಮಾಥರ್ವ ವೇದಸಮೂಹ, ಉಪನಿಷತ್ಗಳು, ಆರಣ್ಯಕ ಮತ್ತು ಬ್ರಾಹ್ಮಣ. ಪೌರುಷೇಯ ಗ್ರಂಥವೆಂದರೆ ಯಾವ ವಾಕ್ಯಗಳ ಅನುಪೂರ್ವಿಯು ಸ್ವತಂತ್ರ ಕರ್ತೃವಿನಿಂದ ರಚಿತವಾಗಿದೆಯೋ ಆ ವಾಕ್ಯಸಮುದಾಯ, ಸ್ಮೃತಿಗಳು, ಪುರಾಣಗಳು, ಮನ್ವಾದಿಧರ್ಮಶಾಸ್ತ್ರಗಳು ಇತ್ಯಾದಿ.

**ಸದಾಗಮ ದುರಾಗಮ ವಿವೇಕ :**

ಶ್ರೀಮದಾನಂದತೀರ್ಥರು ವಿಷ್ಣುತತ್ವನಿರ್ಣಯವೆಂಬ ಗ್ರಂಥದಲ್ಲಿ, ಶ್ರೀಮನ್ನಾರಾಯಣನಿಗೆ **'ಸದಾಗಮೈಕವಿಜ್ಞೇಯ'** ಎಂಬ ವಿಶೇಷಣೋಪಾದಾನ ಮಾಡಿದ್ದಾರೆ. ಆ ವಿಶೇಷಣವೇ ಆ ಗ್ರಂಥದ ಪ್ರಥಮ ಪರಿಚ್ಛೇದ. ಸದಾಗಮಾದಿಗಳನ್ನು ನಿರೂಪಿಸಲು ಕೆಳಗಿನ ಪುರಾಣವಾಕ್ಯವನ್ನೇ ಪ್ರಮಾಣವಾಗಿ ಉದಹರಿಸಿದ್ದಾರೆ.

**'ಋಗಾದ್ಯಾಭಾರತಂ ಚೈವ ಪಂಚರಾತ್ರಮಥಾಖಿಲಮ್।**
**ಮೂಲರಾಮಾಯಣಂ ಚೈವ ಪುರಾಣಂ ಚೈತದಾತ್ಮಕಮ್।**
**ಯೇಚಾನುಯಾಯಿನಸ್ತ್ವೇಷಾಂ ಸರ್ವೇ ತೇ ಚ ಸದಾಗಮಾಃ।**
**ದುರಾಗಮಾಃ ತದನ್ಯೇ ಯೇ ತೈರ್ನಜ್ಞೇಯೋ ಜನಾರ್ದನಃ।**

**ಜ್ಞೇಯ ಏತೈಃಸದಾಯುಕ್ತೈಃ ಭಕ್ತಿಮದ್ಭಿಃ ಸುನಿಷ್ಠಿತೈಃ।**

**ನ ಚ ಕೇವಲ ತರ್ಕೇಣ ನಾಕ್ಷಜೇನ ನ ಕೇನಚಿತ್।**

**ಕೇವಲಾಗಮವಿಜ್ಞೇಯೋ ಭಕ್ತೈರೇವ ನ ಚಾನ್ಯಥಾ॥ಇತಿ ಬ್ರಹ್ಮಾಂಡೇ॥**

'ಋಗ್ವೇದ ಯಜುರ್ವೇದ ಸಾಮವೇದ ಅಥರ್ವಣವೇದ ಎಂಬ ನಾಲ್ಕು ವೇದಗಳು, ಸಮಗ್ರವಾದ ಪಂಚರಾತ್ರ, ಮೂಲರಾಮಾಯಣ, ಇವುಗಳನ್ನನುಸರಿಸಿ ರಚಿತವಾದ ಪುರಾಣಗಳು ಮತ್ತು ಮನ್ವಾದಿಧರ್ಮಶಾಸ್ತ್ರಾದಿಗಳು ಇವೆಲ್ಲಾ ಸದಾಗಮಗಳು. ಇವುಗಳಿಗೆ ವಿರುದ್ಧವಾದವುಗಳೂ ಉದಾಸೀನವಾದವುಗಳೂ ದುರಾಗಮಗಳು. ಹೀಗೆ ವಿರುದ್ಧವಾದವುಗಳಿಂದ ಜನಾರ್ದನನ ಜ್ಞಾನವಾಗುವುದಿಲ್ಲ. ವೇದಾದಿ ಸದಾಗಮಗಳಲ್ಲಿ ಆದರವುಳ್ಳವರಿಗೂ ಧೃಡಭಕ್ತಿಯುಳ್ಳವರಿಗೂ ಈ ಸದಾಗಮಗಳಿಂದ ಯಥಾರ್ಥ ಜ್ಞಾನ ಲಭಿಸುವುದು. ವೇದಾದಿಗಳಿಗೆ ಅನುಕೂಲವಲ್ಲದ ತರ್ಕ, ಪ್ರತ್ಯಕ್ಷ ಅರ್ಥಾಪತ್ತಿಗಳಿಂದಾಗಲೀ ಪರಮಾತ್ಮನ ಜ್ಞಾನದೊರೆಯುವುದಿಲ್ಲ. ಕೇವಲ ಸದಾಗಮಗಳಿಂದಲೇ ಪರಮಾತ್ಮನ ಜ್ಞಾನವಾಗುವುದು. ಇದು ಸಹ ಅನನ್ಯ ಭಕ್ತಿಯಿಂದಲೇ ಸಾಧ್ಯ. ಇಲ್ಲದವರಿಗೆ ಇಲ್ಲ. ಬೇರೆ ಪ್ರಮಾಣಗಳಿಂದ ಆಗುವುದಿಲ್ಲ. ಎಂದು ಬ್ರಹ್ಮಾಂಡ ಪುರಾಣದಲ್ಲಿ ಉಕ್ತವಾಗಿದೆ.

ವೇದಗಳು ನಿತ್ಯವೆಂದು ವೇದವಚನಗಳೇ ತಿಳಿಸುತ್ತವೆ:

**'ವಾಚಾವಿರೂಪನಿತ್ಯಾಯಾ।**

**ನಿತ್ಯಯಾ ಅನಿತ್ಯಯಾ ಸ್ತೌಮಿ ಬ್ರಹ್ಮತತ್ಪರಮಂ ಪದಮಿತಿ।**

**ಶ್ರುತಿರ್ವಾವ ನಿತ್ಯಾ ಅನಿತ್ಯಾವಾವ ಸ್ಮೃತಯಃ ಯಾಶ್ಚಾನ್ಯಾವಾಚಃ॥ಇತಿ ಪೈಂಗೀಶ್ರುತಿಃ॥**

'ವಿರೂಪನಾಮಕ ಋಷಿಯೇ, ನಿತ್ಯವಾದ ವೇದರೂಪವಾಣಿಯಿಂದ ಸ್ತುತಿಸು.
ಪರಬ್ರಹ್ಮನನ್ನು ನಿತ್ಯವಾದ ಮತ್ತು ಅನಿತ್ಯವಾದ ವಾಣಿಗಳಿಂದ ಸ್ತುತಿಸುವೆನು. ಶ್ರುತಿವಚನಗಳು ನಿತ್ಯ, ಸ್ಮೃತಿಗಳು ಇನ್ನಿತರ ವಚನಗಳು ಅನಿತ್ಯವಾದವು' ಎಂದು ಪೈಂಗೀಶ್ರುತಿವಚನವಿದೆ.

**'ಸಹಸ್ರ ಧಾ ಮಹಿಮಾನಂ ಸಹಸ್ರಂ ಯಾವದ್ ಬ್ರಹ್ಮವಿಷ್ಠಿತಂ ತಾವತೀವಕ್।**

**ಕಃ ಛಂದಸಾಂಯೋಗಮಾವೇದ ಧೀರಃ ಕೋ ಧಿಷ್ಣ್ಯಾಂ ಪ್ರತಿವಾಚಂ ಪಪಾದ'॥ಇತ್ಯಾದಿ ಚ॥**

'ಬ್ರಹ್ಮನ ಮಹಿಮೆಗಳು ಅಪರಿಮಿತ ಮತ್ತು ಅವನ ಒಂದೊಂದು ಮಹಿಮೆಯೂ ಅಪಾರವೇ. ಪರಬ್ರಹ್ಮನು ಎಷ್ಟು ದೇಶಕಾಲಗಳನ್ನು ವ್ಯಾಪಿಸಿಕೊಂಡಿರುವನೋ ವೇದವಾಣಿಯೂ ಸಹ ಅಷ್ಟೇವ್ಯಾಪ್ತವಾಗಿವೆ. ವೇದಗಳ ಅರ್ಥಗಳನ್ನು ಯಾವ ಮೇಧಾವಿಯು ತಾನೆ ತಿಳಿಯಬಲ್ಲನು? ಯಾರು ಅರ್ಥಜ್ಞಾನಪೂರ್ವಕವಾಗಿ ವ್ಯಾಖ್ಯಾನ ಮಾಡಬಲ್ಲರು?' ಇತ್ಯಾದಿ ಶ್ರುತಿಗಳಿವೆ. **'ನಿತ್ಯಾವೇದಾಸಮಸ್ತಾಶ್ಚಶಾಶ್ವತಾ ವಿಷ್ಣುಬುದ್ಧಿಗಾಃ।**

**ಸರ್ಗೇಸರ್ಗೇ ಅಮುನೈವೈತೇ ಉದ್ಗೀರ್ಯಂತೇ ತಥೈವ ಚ।**

**ತತ್ಕ್ರಮೇಣೈವ ತೈರ್ವರ್ಣೈಃ ತೈಃಸ್ವರೈರೇವ ನಾನ್ಯಥಾ।**

**ಅತಃಶ್ರುತಿತ್ವಮೇತಾಸಾಂ ಶ್ರುತಾ ಏವ ಯತೋಽಖಿಲೈಃ।**

-----------------------------------------------------------

---

**ಪುರಾಣಾನಿ ತದರ್ಥಾನಿ ಸರ್ಗೇ ಸರ್ಗೇ ಅನ್ಯಥೈವತು।**

**ಕ್ರೀಯಂತೇಽತಸ್ತ್ವನಿತ್ಯಾನಿ ತದರ್ಥಾಃ ಪೂರ್ವಸರ್ಗವತ್॥ಇತಿ ಬ್ರಹ್ಮಾಂಡೇ॥**

ಸಮಸ್ತವೇದಗಳು (ವಿಧಿ, ಅರ್ಥವಾದ, ಪ್ರಾರ್ಥನಾ, ಪ್ರೇಷಣ ಇತ್ಯಾದಿ ಬಹು ಪ್ರಕಾರವಾದವುಗಳು) ನಿತ್ಯವಾದವುಗಳು ಮತ್ತು ಶಾಶ್ವತ ಯಾವಾಗಲೂ ಏಕಪ್ರಕಾರವಾದವು. ಪ್ರಳಯಕಾಲದಲ್ಲಿಯೂ ವಿಚ್ಛೇದರಹಿತವಾಗಿ, ವಿಷ್ಣುಬುದ್ಧಿಗತವಾಗಿ ಇರತಕ್ಕವು. ಪ್ರತಿಯೊಂದು ಸೃಷ್ಟಿಯ ಆರಂಭದಲ್ಲಿಯೂ ಪರಮಾತ್ಮನಿಂದ ಚತುರ್ಮುಖ ಬ್ರಹ್ಮಾದಿಗಳಿಗೆ ಒಂದೇರೀತಿಯಲ್ಲಿ, ಅಂದರೆ ಒಂದೇರೀತಿಯಾದ ವರ್ಣ, ಸ್ವರ, ಕ್ರಮಗಳುಳ್ಳವುಗಳಾಗಿ ಏಕರೂಪೀ ಆನುಪೂರ್ವೀಕ್ರಮದಲ್ಲಿ ಉಚ್ಚರಿಸಲ್ಪಟ್ಟು ಉಪದೇಶಿಸಲ್ಪಡುತ್ತವೆ. ಇವುಗಳಲ್ಲಿ ಯಾವವಿಧವಾದ ವ್ಯತ್ಯಾಸವೂ ಇರುವುದಿಲ್ಲ. ವೇದಗಳು ಪರಮಾತ್ಮನಿಗೆ ದೃಷ್ಟವಾಗಿವೆ. ಇತರರಿಗೆ ಶ್ರುತವಾಗಿವೆ. ಆದ್ದರಿಂದ ಪ್ರಾಚೀನರು ಇವುಗಳನ್ನು ದೃಷ್ಟಿ, ಶ್ರುತಿ ಎಂದು ಹೇಳಿರುವರು.

ವೇದಗಳ ಅರ್ಥವನ್ನು ತಿಳಿಸುವುದೇ ಪುರಾಣಗಳ ಪ್ರಯೋಜನ. ಇವುಗಳು ಪ್ರತಿಯೊಂದು ಸೃಷ್ಟಿಯಲ್ಲಿಯೂ ಭಿನ್ನಪದಾದಿ ಕ್ರಮವ್ಯತ್ಯಾಸದಿಂದ ರಚಿಸಲ್ಪಡುವವು. ಆದುದರಿಂದ ಇವು ಅನಿತ್ಯವಾದ ವಾಕ್ಯಸಮೂಹವೆನ್ನುತ್ತಾರೆ. ಪ್ರತಿಪಾದ್ಯವಿಷಯದಲ್ಲಿ ವ್ಯತ್ಯಾಸವಿಲ್ಲ ಅಥವಾ ಅರ್ಥ ವ್ಯತ್ಯಾಸವಿಲ್ಲ. ಹೀಗೆ ಬ್ರಹ್ಮಾಂಡಪುರಾಣ ವಚನವಿದೆ.

**ಶ್ರುತಿ ಸ್ಮೃತಿಗಳಲ್ಲಿ ಪ್ರತಿಪಾದ್ಯವಾದ ಪ್ರಧಾನ ಪ್ರಮೇಯ:**

ಶ್ರುತಿ ಸ್ಮೃತಿಗಳಲ್ಲಿ ಪ್ರಧಾನಪ್ರಮೇಯವು ಭಗವಾನ್ ವಿಷ್ಣು ಎಂಬದು ಕೆಳಗಿನ ಶ್ರುತಿ ಮತ್ತು ಪುರಾಣವಾಕ್ಯಗಳಿಂದ ಸ್ಪಷ್ಟವಾಗುವುದು.

**'ಸರ್ವೋತ್ಕರ್ಷೇ ದೇವದೇವಸ್ಯ ವಿಷ್ಣೋಃ**

**ಮಹತಾತ್ಪರ್ಯಂ ನೈವಚಾನ್ಯಸ್ಯ ಸತ್ಯಮ್।**

**ಅವಾಂತರಂ ತತ್ಪರತ್ವಂ ತದನ್ಯತ್**

**ಸರ್ವಾಗಮಾನಾಂ ಪುರುಷಾರ್ಥಃ ತತೋಽತಃ॥ಇತಿ ಪೈಂಗೀ ಶ್ರುತಿ॥**

**ಮುಖ್ಯಂ ಚ ಸರ್ವವೇದಾನಾಂ ತಾತ್ಪರ್ಯಂ ಶ್ರೀಪತೇಃ ಪರಮ್॥ಇತಿ ಮಹಾವರಾಹೇ॥**

ಮೇಲಿನ ಶ್ರುತಿ ಮತ್ತು ಪುರಾಣ ವಾಕ್ಯಗಳು ಏಕಾರ್ಥ ಬೋಧಕವಾಗಿವೆ. ಇದೇರೀತಿ ಬಹುಸ್ಥಳಗಳಲ್ಲಿ ಶ್ರುತಿ ಸ್ಮೃತಿಗಳಿಗೆ ಸಾಮಂಜಸ್ಯವಿರುವದನ್ನು ಕಾಣಬಹುದು. ಆದ್ದರಿಂದ ಪುರಾಣಗಳು ವೇದಗಳ ಅರ್ಥವನ್ನೇ ಸ್ಪಷ್ಟಪಡಿಸುವವು ಎಂಬುದು ಸ್ಫುಟವಾಗಿ ತಿಳಿಯುವದು.

**ಶ್ರೀವಿಷ್ಣುಪುರಾಣದಲ್ಲಿ ಪುರಾಣಗಳಬಗ್ಗೆ ವಿಸ್ತಾರವಾದ ಉಲ್ಲೇಖ:**

ಶ್ರೀವೇದವ್ಯಾಸರು ವೇದಗಳನ್ನು ವಿಭಾಗಮಾಡಿ ತಮ್ಮ ಶಿಷ್ಯರಿಗೆ ಉಪದೇಶಿಸಿದ ನಂತರ, ತಾವು ಕಣ್ಣಾರೆಕಂಡ ವಿಷಯವನ್ನು ತಿಳಿಸುವ ಭಾರತಾದಿ ಇತಿಹಾಸ ರೂಪಗಳಾದ ಆಖ್ಯಾನಗಳಿಂದಲೂ, ಕೇಳಿದ ಅರ್ಥವನ್ನು ಹೇಳುವ ಉಪಾಖ್ಯಾನಗಳಿಂದಲೂ ಪಿತೃ, ಪೃಥಿವೀ, ಗೀತೆಗಳೆಂಬ ಗಾಥೆಗಳಿಂದಲೂ, ವಾರಾಹಾದಿ

ಕಲ್ಪವೃತ್ತಾಂತವನ್ನು ನಿರ್ಣಯಿಸುವ ಕಲ್ಪಶುದ್ಧಿಗಳಿಂದಲೂ, ಸರ್ಗಾದಿ ಪಂಚಲಕ್ಷಣಗಳಿಂದಲೂ ಕೂಡಿದ ಪುರಾಣಸಂಹಿತೆಯನ್ನು ರಚಿಸಿದರು.

ಕೃತಯುಗದಲ್ಲಿ ವೇದವಿಭಾಗಗಳ ಮುನ್ನ-ಚರ್ತುಮುಖಬ್ರಹ್ಮನಿಂದ ಸೃಷ್ಟವಾದ ಶತಕೋಟಿವಿಸ್ತಾರವಾದ ಬ್ರಾಹ್ಮವೆಂಬ ಹೆಸರಿನ ಪುರಾಣಸ್ಕಂಧವು, ಪುನಃ ತ್ರೇತಾಯುಗದಲ್ಲಿ ಬ್ರಹ್ಮಾದ್ಯಷ್ಟಾದಶ ಋಷಿಗಳಿಂದ ಕೋಟಿಗ್ರಂಥಗಳಾಗಿ ಸಂಗ್ರಹಿಸಿ ಬ್ರಹ್ಮಪಾದ್ಮಾದಿ ಅಷ್ಟಾದಶರೂಪದಿಂದ ವಿಭಾಗಿಸಿದ ಒಂದುನೂರಾಒಂದು ಸಂಹಿತೆಯು, ಪುನಃ ದ್ವಾಪರಾಂತ್ಯದಲ್ಲಿ ಅದರ ಸಾರವನ್ನು ಭಗವಾನ್ ವೇದವ್ಯಾಸರು ನಾಲ್ಕುಲಕ್ಷಗ್ರಂಥಗಳಾಗಿ ಸಂಕ್ಷೇಪಮಾಡಿ, ಹದಿನೆಂಟುಪುರಾಣಗಳನ್ನಾಗಿ ರಚಿಸಿ ರೋಮಹರ್ಷಣವೆಂಬ ಸೂತನಿಗೆ ಉಪದೇಶ ಮಾಡಿದರು.

ವಿಷ್ಣುಪುರಾಣದಲ್ಲಿ ಪುರಾಣಗಳ ಆಗತಿ ಕ್ರಮವನ್ನು ವರ್ಣಿಸಿದ್ದಾರೆ.

**'ಅಖ್ಯಾನೈಶ್ಚಾಪ್ಯುಪಾಖ್ಯಾನೈರ್ಗಾಥಾಭಿಃಕಲ್ಪಶುದ್ದಿಭಿಃ।**
**ಪುರಾಣಸಂಹಿತಾಂ ಚಕ್ರೇ ಪುರಾಣಾರ್ಥವಿಶಾರದಃ॥**
**ಫ್ರಖ್ಯಾತೋ ವ್ಯಾಸಶಿಷ್ಯೋಽಭೂತ್ ಸೂತೋ ವೈ ರೋಮಹರ್ಷಿಣಃ।**
**ಪುರಾಣಸಂಹಿತಾಂ ತಸ್ಮೈ ದದೌ ವ್ಯಾಸೋ ಮಹಾಮತಿಃ' ॥**

ವೇದವ್ಯಾಸರು ಪುರಾಣಸಂಹಿತೆಯನ್ನು ರಚಿಸಿ ರೋಮಹರ್ಷಣನೆಂಬ ಶಿಷ್ಯನಿಗೆ ಉಪದೇಶಿಸಿದರು. ಇವರೇ ಸೂತಪೌರಾಣಿಕರು. ಇವರ ಶಿಷ್ಯಪರಂಪರೆಯಿಂದ ಪುರಾಣಸಂಹಿತೆಯು ಜಗತ್ತಿನಲ್ಲಿ ಬೆಳೆಯಿತು.

**'ಅದ್ಯಂ ಸರ್ವಪುರಾಣಾನಾಂ ಪುರಾಣಂ ಬ್ರಹ್ಮಮುಚ್ಯತೇ।**
**ಅಷ್ಟಾದಶ ಪುರಾಣಾನಿ ಪುರಾಣಜ್ಞಾಃ ಪ್ರಚಕ್ಷತೇ॥**
**ಬ್ರಾಹ್ಮಂ ಪಾದ್ಮಂ ವೈಷ್ಣವಂ ಚ ಶೈವಂ ಭಾಗವತಂ ತಥಾ।**
**ತಥಾನ್ಯಂ ನಾರದೀಯಂ ಚ ಮಾರ್ಕಂಡೇಯಂ ಚ ಸಪ್ತಮಮ್॥**
**ಆಗ್ನೇಯಮಷ್ಟಮಂ ಚೈವ ಭವಿಷ್ಯನ್ನವಮಂ ಸ್ಮೃತಮ್।**
**ದಶಮಂ ಬ್ರಹ್ಮವೈವರ್ತಂ ಲೈಂಗಮೇಕಾದಶಂ ಸ್ಮೃತಮ್।**
**ವಾರಾಹಂ ದ್ವಾದಶಂ ಚೈವ ಸ್ಕಾಂಚಾತ್ರ ತ್ರಯೋದಶಮ್।**
**ಚತುರ್ದಶಂ ವಾಮನಂ ಚ ಕೌರ್ಮಂ ಪಂಚದಶಂ ತಥಾ॥**
**ಮಾತ್ಸ್ಯಂ ಚ ಗರುಡಂ ಚೈವ ಬ್ರಹ್ಮಾಂಡಂ ಚ ತತಃ ಪರಮ್।**
**ಮಹಾಪುರಾಣರನ್ಯೇತಾನಿಹ್ಯಷ್ಟಾದಶ ಮಹಾಮುನೇ॥**
**ತಥಾಚೋಪಪುರಾಣಾನಿ ಮುನಿಭಿಃ ಕಥಿತಾನಿ ಚ।**
**ಸರ್ಗಶ್ಚ ಪ್ರತಿಸರ್ಗಶ್ಚ ವಂಶಮನ್ವಂತರಾಣಿ ಚ॥**
**ಸರ್ವೇಷ್ವೇತೇಷು ಕಥ್ಯಂತೇ ವಂಶಾನುಚರಿತಂ ಚ ಯತ್॥**

ಭಗವಾನ್ ವೇದವ್ಯಾಸರಿಂದ ನಿರ್ಮಿತವಾದ ಮಹಾಪುರಾಣಗಳು ಹದಿನೆಂಟು:

ಬ್ರಹ್ಮ, ಪದ್ಮ, ವೈಷ್ಣವ, ಶೈವ, ಭಾಗವತ, ನಾರದೀಯ, ಮಾರ್ಕಂಡೇಯ, ಅಗ್ನೇಯ, ಭವಿಷ್ಯತ್, ಬ್ರಹ್ಮವೈವರ್ತ, ಲೈಂಗ, ವಾರಾಹ, ವಾಮನ, ಕೌರ್ಮ, ಮಾತ್ಸ್ಯ, ಗರುಡ, ಬ್ರಹ್ಮಾಂಡ.

ಹಾಗೆಯೇ ಮುನಿಗಳಿಂದ ರಚಿತವಾದ ಉಪಪುರಾಣಗಳೂ ಹದಿನೆಂಟು. ಎಲ್ಲಾ ಪುರಾಣಗಳಲ್ಲಿಯೂ ನಿಯಮೇನ ಸೃಷ್ಟಿ, ವಂಶ, ಮನ್ವಂತರ, ವಂಶಾನುಚರಿತ ಈ ಐದು ವಿಷಯಗಳು ಹೇಳಲ್ಪಟ್ಟಿವೆ. ಭಾಗವತಾದಿ ಕೆಲವು ಹತ್ತು ಲಕ್ಷಣಗಳಿಂದ ಕೂಡಿವೆ. ಇವುಗಳಲ್ಲಿ ಸರ್ವಕರ್ತನು ವಿಷ್ಣುವೆಂದು ನಿರೂಪಿತವಾಗಿದೆ.

ಈ ಮಹಾಪುರಾಣಗಳಲ್ಲಿ ಹದಿನೆಂಟು ವಿದ್ಯೆಗಳಿವೆ ಎಂದು ಉಕ್ತವಾಗಿದೆ. ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪ ಎಂಬ ಆರುವೇದಾಂಗಗಳೂ ಋಗ್ಯಜುಸ್ಸಾಮಾಥರ್ವಣಗಳೆಂಬ ನಾಲ್ಕು ವೇದಗಳೂ, ಮಿಮಾಂಸಾ, ನ್ಯಾಯ, ಪುರಾಣ, ಧರ್ಮಶಾಸ್ತ್ರ ಇವಲ್ಲದೇ ಆಯುರ್ವೇದ, ಧನುರ್ವೇದ, ಗಾಂಧರ್ವವೇದ ಮತ್ತು ಅರ್ಥಶಾಸ್ತ್ರ ಹೀಗೆ ಹದಿನೆಂಟು ವಿದ್ಯೆಗಳಾಗುತ್ತವೆ. ಪುರಾಣಗಳು ವೇದೋಪಬ್ರುಂಹಕಗಳಾದ್ದರಿಂದಲೂ, ಸಕಲವೇದಗಳಿಗೂ ಧರ್ಮವೇಮೂಲವಾದ್ದರಿಂದಲೂ **'ವೇದೋಽಖಿಲಂ ಧರ್ಮಮೂಲಂ'** ಎಂಬ ವಚನದಂತೆ ಧರ್ಮವಿಧ್ಯಾಸ್ಥಾನಗಳಲ್ಲಿ ಪುರಾಣಗಳು ಸೇರಿವೆ ಎಂದು ನಿರೂಪಿಸಿದೆ. ಅಷ್ಟಾದಶ ಪುರಾಣಗಳ ಶ್ಲೋಕ ಸಂಖ್ಯೆ ಸುಮಾರು ನಾಲ್ಕುಲಕ್ಷವಾಗುತ್ತವೆ. ಇಂಥ ಬೃಹತ್ಪ್ರಮಾಣದ ಗ್ರಂಥರಾಶಿಯನ್ನು ಬರೆದವರು ಯಾರು ಎಂಬ ಆಕಾಂಕ್ಷೆ ಯಾರಿಗಾದರೂ ಬರುವುದು ಸಹಜ. ಈ ಬೃಹದ್ಗ್ರಂಥರಾಶಿಯ ರಚನೆಯಾದದ್ದು ಭಗವಾನ್ ವೇದವ್ಯಾಸರಿಂದಲೇ. **'ಅಷ್ಟಾದಶ ಪುರಾಣಾನಾಂಕರ್ತಾ ಸತ್ಯವತೀಸುತಃ'** ಎಂಬ ಪ್ರಸಿದ್ಧಿ ವಚನಗಳಿವೆ. ಅಲ್ಲದೇ-

**'ನಿಸ್ತಾರಾಯ ತು ಲೋಕಾನಾಂ ಸ್ವಯಂ ನಾರಾಯಣ ಪ್ರಭುಃ।**
**ವ್ಯಾಸರೂಪೇಣ ಕೃತವಾನ್ ಪುರಾಣಾನಿ ಮಹೀತಲೇ' ॥**

ಇದರಿಂದ, ಶ್ರೀಮನ್ನಾರಾಯಣನೇ ವ್ಯಾಸರೂಪದಿಂದ ಲೋಕಹಿತಕ್ಕಾಗಿ / ಶ್ರೇಯಸ್ಸಿಗಾಗಿ ಅಷ್ಟಾದಶ ಪುರಾಣಗಳನ್ನು ರಚಿಸಿದ್ದಾರೆಂಬದು ನಿರ್ವಿವಾದ ಸಂಗತಿ.

**'ಅನಂತಾವಹಿ ವೇದಾಃ'** ಎಂಬಂತೆ, ವೇದ ರಾಶಿಯೇ ಸಾಕಷ್ಟು ಇರುವಾಗ ಇನ್ನು ಸ್ಮೃತಿ ಪುರಾಣಗಳ ಅವಶ್ಯಕತೆ ಏನಿದೆ ಎಂಬ ಆಕಾಂಕ್ಷೆ ಬರಲು ಸಾಧ್ಯ. ಅದಕ್ಕೆ ಈ ಮೊದಲೇ ಶ್ರುತಿಗಳು ತಿಳಿಸಿದಂತೆ, ಶ್ರುತಿಗಳನ್ನು ಪಠಣ ಮಾಡುವುದೇ ಸುಲಭಸಾಧ್ಯವಲ್ಲ. ರಚನೆಮಾಡುವುದು ಅಶಕ್ಯ. ಅರ್ಥವನ್ನರಿತು ವ್ಯಾಖ್ಯಾನ ಮಾಡುವ ಧೀರನಾರು; ಎಂಬ ಉಲ್ಲೇಖವನ್ನು ಈ ಮೊದಲೇ ನೋಡಿದ್ದೇವೆ. ವೇದಗಳ ಪಠಣ ಕ್ರಮವೇ ಬೇರೆ. ಅದರ ವ್ಯಾಕರಣವೇ ಬೇರೆ. ಅವುಗಳ ನಿರುಕ್ತಗಳೇ ಬೇರೆ. ಅದರ ಷಡಂಗಗಳೇ ಬೇರೆ. ಸಂಸ್ಕೃತ ಸಾಹಿತ್ಯದ ಶಬ್ದಭಂಡಾರವು ವೇದಪದಗಳನ್ನು ಅರ್ಥೈಸಲು ಅನ್ವಯಿಸವು. ಹೀಗಿದ್ದರೂ ವೇದಗಳೇ ನಮ್ಮ ಸಂಸ್ಕೃತಿಗೆ ಮೂಲ. ಹೇಗೆಂದರೆ ಸಾಕ್ಷಾನ್ನಾರಾಯಣನು ದೇವತೆಗಳಿಗೆ ಉಪದೇಶಿಸಿದನು. ದೇವತೆಗಳಿಂದ ಯಥಾಯೋಗ್ಯತಾನುಸಾರವಾಗಿ ಮಾನವಕುಲಕ್ಕೆ ಪ್ರಾಪ್ತವಾಯಿತು. ಶ್ರೀವೇದವ್ಯಾಸರಿಂದ ರಚಿತವಾದ ಪುರಾಣಗಳಿಗೆ ಶ್ರುತಿಮೂಲವಿರುವದರಿಂದ ಅವು ಪ್ರಮಾಣಪದವಿಗೇರಿವೆ. ಈ ಗುಣದೊಂದಿಗೆ ಇದಕ್ಕೆ ಆಪ್ತಿಮೂಲವು ಸೇರಿರುವುದು ಒಂದು ವಿಶೇಷಾಂಶ (ಅನುವ್ಯಾಖ್ಯಾನದಲ್ಲಿ ಶ್ರೀಮದಾನಂದತೀರ್ಥರು ಈ ವಿಚಾರವನ್ನು ವಿಸ್ತಾರವಾಗಿ ಮಾಡಿದ್ದಾರೆ). ಹೇಗೆಂದರೆ, ಆಪ್ತ ಎಂದರೆ ಯಥಾರ್ಥವಕ್ತಾ. ಆಪ್ತನಲ್ಲಿ ನಾಲ್ಕು

ಮುಖ್ಯವಾದ ಗುಣಗಳಿರಬೇಕು. ಯಾವವೆಂದರೆ- ವಿವಕ್ಷಿತಾರ್ಥತತ್ವಜ್ಞಾನ, ವಿವಕ್ಷಾ, ಕರಣಪಾಟವ, ಅವಿಪ್ರಲಿಪ್ಸಾ. ಎಂದರೆ - ಹೇಳಬಯಸುವ ತತ್ವಜ್ಞಾನದ ಪರಿಪೂರ್ಣತೆ (ಅರ್ಥಾತ್ ಸರ್ವಜ್ಞರು), ಹೇಳಲು ಇಚ್ಛೆ. ಇಂದ್ರಿಯಗಳಲ್ಲಿ ಸ್ಪಷ್ಟ ಉಚ್ಚಾರಣ ಶಕ್ತಿ, ನಿರ್ವಂಚಕತ್ವ. ಈ ನಾಲ್ಕು ಗುಣಗಳು ವೇದವ್ಯಾಸ ದೇವರಲ್ಲಿ ಅಪರಿಮಿತವಾಗಿವೆ. ಸರ್ವಜ್ಞರಾದ ಅವರು ಆಪ್ತರೇ.

**ಶ್ರುತಿ ಸ್ಮೃತಿ ಪುರಾಣಗಳ ಪರಸ್ಪರ ಸಂಬಂಧ:**

ಆದರೂ ಶ್ರುತಿಗಳಲ್ಲಿ ಅನೇಕ ಭಾಗಗಳು ಅಸ್ಪಷ್ಟವಾಗಿಯೇ ಇವೆ. ಬುಧ್ಯಾರೂಢವಾಗುವದು ದುಸ್ತರ. ಆದ್ದರಿಂದ ಇವುಗಳ ಸ್ಪಷ್ಟೀಕರಣದ ಮೊದಲನೆಯ ಹಂತವೆಂದರೆ ಸ್ಮೃತಿಗಳು, ನಂತರ ಪುರಾಣಗಳು. ಈ ವಿಷಯವು ಕೆಳಗಿನ ಪುರಾಣವಾಕ್ಯದಿಂದ ವ್ಯಕ್ತವಾಗುವದು:

**'ಯನ್ನದೃಷ್ಟಂ ಹಿ ವೇದೇಷು ತತ್ಸರ್ವಂ ಲಕ್ಷತೇ ಸ್ಮೃತೌ।**
**ಉಭಯೋರ್ಯನ್ನದೃಷ್ಟಂ ಹಿ ತತ್ಪುರಾಣೈಃ ಪ್ರಗೀಯತೇ॥**
**ವೇದಾರ್ಥದಧಿಕಂ ಮನ್ಯೇ ಪುರಾಣಾರ್ಥಂ ವರಾನನೇ।**
**ವೇದಃ ಪ್ರತಿಷ್ಠಿತಾ ಸಮ್ಯಕ್ ಪುರಾಣೇ ನಾತ್ರಸಂಶಯಃ' ॥ಬೃಹನ್ನಾರದೀಯೇ॥**

'ವೇದಗಳಲ್ಲಿ ಯಾವದು ಅಸ್ಪಷ್ಟವಾಗಿದೆಯೋ ಆ ಭಾಗಗಳು ಸ್ಮೃತಿಗಳಲ್ಲಿ ಸ್ಪಷ್ಟೀಕರಣವಾಗಿವೆ. ಎರಡರಲ್ಲೂ ಅಸ್ಪಷ್ಟವಾದ ವಿಚಾರಗಳು ಪುರಾಣಗಳಲ್ಲಿ ಸ್ಫುಟವಾಗಿ ಉಕ್ತವಾಗಿವೆ. ಹೇ ಸುಂದರೀ, ಪುರಾಣಗಳ ಅರ್ಥವನ್ನು ವೇದಗಳಿಗಿಂತಲೂ ಅಧಿಕವೆಂದು ತಿಳಿಯುತ್ತೇನೆ. ವೇದಾರ್ಥಗಳು ಪುರಾಣಗಳಲ್ಲಿಯೇ ಸುಪ್ರತಿಷ್ಟವಾಗಿವೆ'.

**'ಯದಿವಿದ್ಯಾಚ್ಚತುರ್ವೇದಾನ್ ಸಾಂಗೋಪನಿಷದಾನ್ ದ್ವಿಜಃ।**
**ನ ಚಚೇತ್ಪುರಾಣಂ ಸಂವಿದ್ಯಾನ್ನೈವ ಸಸ್ಯಾದ್ವಿಚಕ್ಷಣಃ' ॥**

'ಸಾಂಗವಾಗಿ ವೇದೋಪನಿಷತ್ತುಗಳನ್ನು ಅಧ್ಯಯನ ಮಾಡಿದಾಗ್ಯೂ, ಪುರಾಣಗಳನ್ನು ಚೆನ್ನಾಗಿ ತಿಳಿಯದವನು ವಿಚಕ್ಷನಾಗಲಾರನು'.

**'ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್।**
**ಬಿಭೇತ್ಯಲ್ಪಶ್ರುತಾದ್ವೇದೋ ಮಾಮಯಂ ಪ್ರಹರಿಷ್ಯತಿ (ಪ್ರಚಲಿಷ್ಯತಿ)' ॥**

ಇತಿಹಾಸ ಪುರಾಣಗಳ ಸಹಾಯದಿಂದ ವೇದಗಳನ್ನು ಅರ್ಥಮಾಡಬೇಕು. ಕೇವಲ ಅಲ್ಪ ಜ್ಞಾನವುಳ್ಳವನನ್ನು ಕಂಡರೆ ವೇದವು, ನನ್ನನ್ನು ಎಲ್ಲಿ ಇವನು ಅಪಾರ್ಥಮಾಡುವನೋ ಎಂದು ಭಯಪಡುತ್ತವೆ'.

**ಪುರಾಣ ಪದದ ವ್ಯುತ್ಪತ್ತಿ:**

**'ಪುರಾಪಿ ನವಂ ಪುರಾಣಂ'** ಅಥವಾ **'ಪುರಾ ಭವಂ ಪುರಾಣಂ'** ಎಂಬ ವ್ಯುತ್ಪತ್ತಿಯಂತೆ ಸನಾತನವು ಮತ್ತು ನಿತ್ಯನೂತನವೂ ಆದ ಧರ್ಮವನ್ನೂ ದಾರ್ಶನಿಕ ತತ್ವವನ್ನೂ ನಿರೂಪಿಸುವ ಗ್ರಂಥ ಸಮುದಾಯ ಪುರಾಣಗಳೆನಿಸುತ್ತವೆ. **'ವೇದಪ್ರಣಿಹಿತೋ ಧರ್ಮಃ ಅಧರ್ಮಃ ತದ್ವಿಪರ್ಯಯಃ'** ಅಂದರೆ ವೇದದಲ್ಲಿ ವಿಧಿಮುಖವಾಗಿ ಹೇಳಿದ್ದೆಲ್ಲ ಧರ್ಮ; ನಿಷೇಧಮುಖವಾಗಿ ಹೇಳಿದ್ದೆಲ್ಲವೂ ಅಧರ್ಮ ಎಂದು ನಮಗೆ ತಿಳಿಸುವದು ಭಾಗವತ ಪುರಾಣವೇ. ವೇದದ ರಹಸ್ಯಾರ್ಥವು ಆಖ್ಯಾನ ಉಪಾಖ್ಯಾನಗಳೊಂದಿಗೆ ಸರಳವಾಗಿ

ಹೃದಯಂಗಮವಾಗಿ ಪುರಾಣಗಳಲ್ಲಿ ವರ್ಣಿತವಾಗಿವೆ. ಶ್ರುತಿ ಸ್ಮೃತಿ ಮತ್ತು ಪುರಾಣಗಳು ನಮ್ಮ ಭಾರತ ಜನಾಂಗದ ಜೀವಾಳ ಎಂಬದು ಸ್ಪಷ್ಟವಾದಂತಾಯಿತು.

**ಆಬಾಲ ವೃದ್ಧರಿಗೂ ಪುರಾಣವು ಶ್ರವಣೀಯ:**

ಪುರಾಣಗಳಲ್ಲಿ ಆಬಾಲ-ವೃದ್ಧರವರಿಗೆ ಸರ್ವ ವ್ಯಕ್ತಿಗಳ ಆಖ್ಯಾನ / ಉಪಾಖ್ಯಾನಗಳಿವೆ. ಐದುವರ್ಶಮೇಲ್ಪಟ್ಟು ಸರ್ವರಿಂದಲೂ ಪಾಠ ಕಲಿಯಬೇಕಾದ ಆದರ್ಶವ್ಯಕ್ತಿಗಳು ಪುರಾಣಗಳಲ್ಲಿ ಕಾಣಬಹುದು. ಧೃವ, ಪ್ರಹ್ಲಾದಾದಿ ತರುಣರಿಂದಾರಂಭಿಸಿ ಭೀಷ್ಮಾದಿಗಳಷ್ಟು ವೃದ್ಧರು ಸಹ ಸನ್ಮಾರ್ಗಗಳನ್ನು ಬೋಧಿಸುತ್ತಾರೆ.

ಚತುರ್ವರ್ಣ-ಚತುರಾಶ್ರಮಗಳಿಗೂ ಪುರಾಣಗಳು ಮಾರ್ಗದರ್ಶಿಯಾಗಿವೆ. ಜನ್ಮಾರಭ್ಯಮರಣಪರ್ಯಂತರ ಮತ್ತು ಆನಂತರ, ಮಾನವರಿಗೆ ಸಂಸ್ಕಾರಗಳೇನು, ಕರ್ತವ್ಯಗಳೇನು ಎಂಬ ವಿಚಾರಗಳು ವಿಸ್ತಾರವಾಗಿ ವರ್ಣಿತವಾಗಿವೆ. ಲೋಕ ವ್ಯವಸ್ಥಿತಿಗಾಗಿ, ಅಭ್ಯದಯ ನಿಶ್ರೇಯಸಗಳಿಗಾಗಿ ಸರ್ವರಿಗೂ ನಿಯತ, ವಿಹಿತ ಅವಶ್ಯ ಕರ್ತವ್ಯ ಕರ್ಮಗಳನ್ನು ವಿಸ್ತಾರವಾಗಿ ವಿವರಿಸಿದ್ದಾರೆ.

**ಉಪಸಂಹಾರ :**

ಭಾರತೀಯ ಧಾರ್ಮಿಕ-ಸಾಮಾಜಿಕ ಸುವ್ಯವಸ್ಥೆಯು ಈ ವೇದ / ಪುರಾಣಗಳ ಆಧಾರದಮೇಲೆ ನಿಂತಿದೆ. ವೈವಿದ್ಯಮಯವಾದ ಬೃಹತ್ಪ್ರಮಾಣದ ಈ ಸಂಸ್ಕೃತಮಾಧ್ಯಮದ ಅತ್ಯುನ್ನತ ಮಟ್ಟದ ಈ ಪುರಾಣಸಾಹಿತ್ಯವು ಭಾರತಕ್ಕೆ ಭಗವಾನ್ ವೇದವ್ಯಾಸರ ಕೊಡುಗೆ. ಬಹು ಪ್ರಾಚೀನ ಗ್ರಂಥಗಳಾದ್ದರಿಂದ ಅನೇಕ ನಾಗರಿಕತೆಗಳ ಉದಯಸ್ತಗಳನ್ನು ಈ ಗ್ರಂಥಗಳಲ್ಲಿ ಕಾಣಬಹುದು. ಇವುಗಳಲ್ಲಿ ಬರತಕ್ಕ ಎಲ್ಲಾ ವ್ಯಕ್ತಿಗಳೂ ಊಹಾಪೋಹ ಪ್ರಪಂಚದಿಂದ ಪುರಾಣಗಳಲ್ಲಿ ಬಂದವರಲ್ಲ. ನೈಜ ವ್ಯಕ್ತಿಗಳು ಬಹು ಸಂಖ್ಯಾತರಿದ್ದಾರೆ. ಪುರಾಣಗಳ ಆಖ್ಯನಗಳಲ್ಲಿ ಅದ್ಭುತ, ಅಲೌಕಿಕ ಮತ್ತು ಆಶ್ಚರ್ಯಜನಕ ಸನ್ನಿವೇಶಗಳು, ಧಾರ್ಮಿಕವಾದ ನೀತಿ ತತ್ವಗಳು, ಭಗವಂತನ ವಿಲಕ್ಷಣ ಮಹಿಮೆಗಳು, ದೇವತೆಗಳ ವರ್ಣನೆಗಳು, ದೇವತೆಗಳಿಗೂ-ಮಾನವರಿಗೂ ಸಂಪರ್ಕ, ಮಾನವ ಪ್ರಪಂಚಕ್ಕೆ ದೇವ-ದೇವತೆಗಳ ಸಹಾಯ, ಆಧ್ಯಾತ್ಮ ಕ್ಷೇತ್ರದಲ್ಲಿಕಾಲಿಟ್ಟ ಸಾಧಕನಿಗೆ ಜ್ಞಾನ-ಭಕ್ತಿ-ವೈರಾಗ್ಯಗಳ ಮಹತ್ವ, ಸತ್ಯಪರಿಪಾಲನೆ ಮತ್ತು ಧರ್ಮಪರಿಪಾಲನೆಗಳಿಂದ ರಾಜಕೀಯ-ಸಾಮಾಜಿಕ ಭದ್ರತೆಗಳು, ಪ್ರತಿಯೊಬ್ಬವ್ಯಕ್ತಿಯಲ್ಲಿಯೂ ಧಾರ್ಮಿಕ ಮತ್ತು ದೇಶಭಕ್ತಿಯ ಪವಿತ್ರ ಭಾವನೆಗಳು, ಧೈರ್ಯ, ಶೌರ್ಯ, ತ್ಯಾಗ, ಔದಾರ್ಯ, ಸಹಕಾರ ಭಾವನೆಗಳು ಪುರಾಣಶ್ರವಣದಿಂದ ಮಾನವನಲ್ಲಿ ತುಂಬುತ್ತವೆ / ಪ್ರಚೋದಿತವಾಗುತ್ತವೆ. ಪ್ರತಿಯೊಬ್ಬವ್ಯಕ್ತಿಯ ಉನ್ನತಿಯೇ ಸಾಮಾಜಿಕ ಮತ್ತು ರಾಜಕೀಯ ಉನ್ನತಿಗೆ ಕಾರಣವಾಗುತ್ತವೆ. ಈಗಲೂ ಸಂಜೆ ಪುರಾಣಗಳನ್ನು ಹೇಳತಕ್ಕ ಸ್ಥಳಗಳಿವೆ. ಆದರೆ ಕೇಳುವವರ ಸಂಖ್ಯೆ ತೀರ ಕಡಿಮೆ. ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಭಾರತೀಯರ ಜೀವನಕ್ಕೆ ಒಂದು ಹೊಸ ತಿರುವು ಬಂದಿದೆ. ಈ ತಿರುವಿನಿಂದ ನಾವು ಮೌಲಿಕ ವಿದ್ಯೆಗಳಿಂದ ದೂರಹೋಗುತ್ತಿದ್ದೇವೆ. ಸಮಾಜವು ನಿಂತು ವಿವೇಚನೆಮಾಡುವ ಸಮಯವಿದು.

ಪುರಾಣಗಳೇ ನಾಟಕಗಳಾಗಿ, ಬೈಲಾಟಗಳಾಗಿ, ಯಕ್ಷಗಾನಗಳಾಗಿ, ಪ್ರಪಂಚದ ವಿವಿಧ ಭಾಷೆಗಳಲ್ಲಿ ಕಥಾರೂಪಗಳನ್ನು ಹೊಂದಿ, ಇತ್ತೀಚೆಗೆ ಸಿನಿಮಗಳಾಗಿ ಸಮಗ್ರ ಭಾರತದಲ್ಲಿ ಅಷ್ಟೇಕೆ ಇಡೀ ಜಗತ್ತಿನಲ್ಲಿ

ಪ್ರಚಾರವಾದವು. ರಾಮಾಯಣ ಮಹಾಭಾರತವನ್ನು ಜಗತ್ತಿನ ಎಲ್ಲಾ ಖಂಡದವರು ನೋಡಿ ಮೆಚ್ಚಿದರು. ಪ್ರಶಂಸೆಮಾಡಿದರು. ಅವುಗಳಲ್ಲಿರುವ ಅಂತಃಸತ್ವವೇ ಅಷ್ಟು ಮೌಲಿಕವಾದದ್ದು. ಅದೇ ಅವರ ಮೆಚ್ಚುಗೆಗೆ ಕಾರಣ.

ಧರ್ಮವೇ ನಮ್ಮ ದೇಶದ ಶಕ್ತಿ, ಧರ್ಮಗ್ರಂಥಗಳೇ ನಮ್ಮ ದೇಶದ ಪವಿತ್ರ ಧನ. ಇದರ ಸಂರಕ್ಷಣೆ ಭಾರತೀಯರ ಹೊಣೆ.

**ಓಂ ತತ್ಸತ್**

**ಇತಿ ಶ್ರೀಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು.`**